ಸ್ವಾಮಿ ವಿವೇಕಾನಂದರು ಈ ಕಾಲದಲ್ಲಿ ಯೌವನದ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದರು ಎನ್ನುವುದನ್ನು ನಾವು ನೆನಪಿನಲ್ಲಿಡಬೇಕು. ಅದು ಅವರ ಜೀವಮಾನದಲ್ಲಿಯೇ ಅತ್ಯುತ್ತಮವಾದ ಅವಧಿಯಾಗಿತ್ತು. ಆ ಸಮಯದಲ್ಲಿ ಅವರು ಅಪಾರವಾದ ದೈಹಿಕ ಮತ್ತು ಮಾನಸಿಕ ಶಕ್ತಿ ಸಂಪನ್ನರಾಗಿದ್ದರು. ಇದನ್ನು ಅವರು ಸಂಪೂರ್ಣವಾಗಿ ಅಮೆರಿಕದ ಕಾರ್ಯದಲ್ಲಿ ವಿನಿಯೋಗಿಸಿಬಿಟ್ಟರು. ಈ ಪ್ರವಚನಗಳ ಅವಧಿಯು ಸ್ವಾಮಿ ವಿವೇಕಾನಂದರು ಅಮೆರಿಕೆಗೆ ಬಂದ ಸಮಯದಿಂದ ೧೮೯೪ರ ಅಂತ್ಯದಲ್ಲಿ ಅವರು ನ್ಯೂಯಾರ್ಕ್ ನಗರದಲ್ಲಿ ವಾಸ್ತವ್ಯ ಹೂಡಿದ ಕಾಲದವರೆಗೆ ವಿಸ್ತರಿಸಿತ್ತು. ಶ್ರೀರಾಮಕೃಷ್ಣರು ಸ್ವಾಮೀಜಿಯವರ ಬಗ್ಗೆ ನುಡಿದಿದ್ದರು: ''ಈತನು ಈ ಭೂಮಿಯಲ್ಲಿ ಮಾನವ ಜನಾಂಗದ ದುಮ್ಮಾನಗಳನ್ನು ಪರಿಹರಿಸಲೆಂದೇ ಹುಟ್ಟಿದ್ದಾನೆ.'' ಅಂಥ ಮಹಾನ್ ಆಧ್ಯಾತ್ಮಿಕ ವ್ಯಕ್ತಿಯು ತಮ್ಮ ಯೌವನ ಮತ್ತು ಮಹಾನ್ ಶಕ್ತಿಯನ್ನು ವ್ಯರ್ಥವಾಗಿ ಕಳೆದರೆಂದು ಹೇಳಲಾಗುವುದಿಲ್ಲ.

ಸ್ವಾಮೀಜಿಯವರ ಈ ಅಮೆರಿಕಾ ಯಾತ್ರೆಯ ಬಗ್ಗೆ ವಿಧವಿಧವಾದ ವಿವರಣೆಗಳನ್ನು ಅವರ ಕುರಿತಾದ ಹಲವಾರು ಜೀವನ ಚರಿತ್ರೆಗಳಲ್ಲಿ ಕಾಣಬಹುದು. ಅವರು ಈ ಕಾಲದಲ್ಲಿ ಪಾಶ್ಚಾತ್ಯ ನಾಡುಗಳಲ್ಲಿ ವೇದಾಂತವನ್ನು ಬೋಧಿಸಿದರು ಎನ್ನುವುದು ಮೊದಲ ವಿವರಣೆ. ಎರಡನೆಯದು, ಅಮೆರಿಕಾದ ಚಿಂತನಾವಲಯದಲ್ಲಿ ಭಾರತದ ಬಗ್ಗೆ ಇದ್ದ ಹಲವಾರು ತಪ್ಪು ಅಭಿಪ್ರಾಯಗಳನ್ನು ನಿವಾರಿಸುವುದು ಮತ್ತು ಆ ಮೂಲಕ ವೇದಾಂತ ಚಿಂತನೆಯು ಅಮೆರಿಕದ ನೆಲದಲ್ಲಿ ಬೇರೂರುವಂತೆ ಮಾಡುವುದು. ಮೂರನೆಯದು, ಭಾರತಕ್ಕೆ ಅವಶ್ಯವಿರುವ ಧನವನ್ನು ಸಂಗ್ರಹಿಸುವುದು ಮತ್ತು ಅದೇ ಸಮಯದಲ್ಲಿ ಕ್ರೈಸ್ತ ಮಿಷನರಿಗಳ ಅಪಪ್ರಚಾರವನ್ನು ತಡೆಯುವುದು. ಆದರೆ ಸ್ವಾಮೀಜಿಯವರ ಅಮೆರಿಕದ ಕಾರ್ಯದ ಈ ಅವಧಿಯು ಈ ಮೂರೂ ವಿವರಣೆಗಳಿಗೆ ಅನುಗುಣವಾಗಿ ಇರಲಿಲ್ಲವೆಂದೇ ಹೇಳಬೇಕಾಗುತ್ತದೆ. ಏಕೆಂದರೆ, ಮೊದಮೊದಲು ಹೊರಬಂದ ಜೀವನಚರಿತ್ರೆಗಳ ಗ್ರಂಥಕರ್ತರಿಗೆ ಮಾಹಿತಿಗಳ ಕೊರತೆ ಇತ್ತು. ಹೀಗಾಗಿ ಮೇಲಿನ ತಪ್ಪು ಅಭಿಪ್ರಾಯಗಳು ಹುಟ್ಟಿಕೊಂಡವು.

ಆದ್ದರಿಂದ ನಾವು ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಏನನ್ನು ಹೇಳಿದ್ದಾರೋ, ಏನು ಬರೆದಿದ್ದಾರೋ, ಅದನ್ನೇ ಪರಿಗಣಿಸಬೇಕು. ಅದರ ಪ್ರಕಾರ ೧೮೯೪ರ ಕಡೆಯವರೆಗೂ ಸ್ವಾಮೀಜಿ ಪಾಶ್ಚಾತ್ಯದೇಶದಲ್ಲಿ ವೇದಾಂತವನ್ನು ಪ್ರಸಾರ ಮಾಡುವ ಉದ್ದೇಶವನ್ನು ಹೊಂದಿರಲಿಲ್ಲ. ಏಕೆಂದರೆ, ಇದು ಬಹಳ ಸಂಕೀರ್ಣವಾದ ಮತ್ತು ಗಂಭೀರವಾದ ಧ್ಯೇಯ. ಇದನ್ನು ಸಾಧಿಸಲು ವೇದಾಂತ ಪ್ರಚಾರಕನೊಬ್ಬನು ಪಾಶ್ಚಾತ್ಯ ಚಿಂತನೆಯ ಹಲವು ಹತ್ತು ವಿಶೇಷಣಗಳ ಬಗ್ಗೆ ಸಮೀಪದ ಮತ್ತು ಪ್ರಬುದ್ಧವಾದ ಅರಿವನ್ನು ಹೊಂದಿರಬೇಕು. ಪಾಶ್ಚಾತ್ಯ ಜನರ ಆವಶ್ಯಕತೆಗಳ ಬಗ್ಗೆ ತಿಳಿದುಕೊಂಡಿರಬೇಕು. ಕೆಲವು ಕಾಲದ ನಂತರ ಸ್ವಾಮೀಜಿ ಪರಿಕಲ್ಪಿಸಿದ ಹಾಗೆ, ವೇದಾಂತವು ವೈವಿಧ್ಯಮಯವಾದ ಧರ್ಮಗಳ, ತತ್ತ್ವಗಳ ಮತ್ತು ಸಂಸ್ಕೃತಿಗಳ ಒಳನೋಟಗಳನ್ನು ಸಾಮರಸ್ಯಗೊಳಿಸುವ ಒಂದು ಪ್ರಬಲ ಶಕ್ತಿಯಾಗಿದೆ. ಇದಲ್ಲದೆ ಸ್ವಾಮೀಜಿಯವರು ವೇದಾಂತವು ಎಲ್ಲ ಧರ್ಮಗಳ ಅಂತರ್ಗತ ತತ್ತ್ವವಾಗಿದೆ ಹಾಗೂ ಭೌತಿಕ ವಿಜ್ಞಾನದ ಅತ್ಯುನ್ನತ ನಿಷ್ಕರ್ಷೆಯೂ ಆಗಿದೆ ಎಂದು ತೋರಿಸಿಕೊಟ್ಟರು. ಅಖಂಡ ಮಾನವ ಜನಾಂಗದ ಎಲ್ಲ ಸಾಮಾಜಿಕ, ನೈತಿಕ, ಮನೋವೈಜ್ಞಾನಿಕ ಮತ್ತು ತಾತ್ತ್ವಿಕ ಅನ್ವೇಷಣೆಗಳೆಲ್ಲದರ ಗುರಿಯೂ ಕೂಡ ಮಾನವನು ತನ್ನ ನೈಜವಾದ ಸ್ವರೂಪವನ್ನು ಕಂಡುಕೊಳ್ಳುವುದೇ ಆಗಿದೆ. ವೇದಾಂತವು ಇದನ್ನೇ ಏಕಮಾತ್ರ ಗುರಿಯಾಗಿ ಹೊಂದಿರುವ ರಾಜಮಾರ್ಗವಾಗಿದೆ. ಸ್ವಾಮಿ ವಿವೇಕಾನಂದರ ಪ್ರಕಾರ, ವೇದಾಂತವು ಜಗತ್ತಿಗೆ ಭಾರತವು ನೀಡುವ ಅಮೂಲ್ಯ ಕೊಡುಗೆ. ಈ ಕಾರಣದಿಂದಲೇ ಸ್ವಾಮೀಜಿ, ವೇದಾಂತದ ಅಪೂರ್ವ ಕೊಡುಗೆಯನ್ನು ಜಗತ್ತಿಗೆ ನೀಡುವುದಕ್ಕೆ, ಮೊದಲು ಭಾರತೀಯರು ಸಶಕ್ತರಾಗಿರಬೇಕು ಎಂದು ತಮ್ಮ ದೇಶಬಾಂಧವರಿಗೆ ವಿನಂತಿ ಮಾಡಿಕೊಳ್ಳುತ್ತಾರೆ. ಸ್ವಾಮೀಜಿಯವರ ಅಮೆರಿಕ ಪ್ರವಾಸದ ಮೊದಲ ಭಾಗದಲ್ಲಿ ಆಧುನಿಕ ಜಗತ್ತಿನಲ್ಲಿ ವೇದಾಂತದ ಪಾತ್ರವೇನು ಎಂಬ ಬಗ್ಗೆ ನಿಶ್ಚಿತವಾದ ಕಲ್ಪನೆ ಸ್ವಾಮೀಜಿಯವರ ಮನಸ್ಸಿನಲ್ಲಿ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಭಾವನೆಯು ವಿಕಸನಗೊಳ್ಳುವುದಕ್ಕೆ ಇನ್ನೂ ಸ್ವಲ್ಪ ಕಾಲ ಹಿಡಿಯಿತು.

ಇಷ್ಟಾದರೂ ಅವರಲ್ಲಿ ಮನೆಮಾಡಿದ್ದ ವೇದಾಂತದ ಪರಿಕಲ್ಪನೆಯು ತನ್ನು ಪ್ರಬುದ್ಧತೆಯನ್ನು ಪಡೆದುಕೊಂಡದ್ದು ೧೮೯೪ರ ನಂತರವೇ ಎಂಬುದು ನಿಶ್ಚಿತ. ಅದಕ್ಕೆ ಹಿಂದೆ ಮಾಡಿದ ಪ್ರವಚನಗಳಲ್ಲಿ ಅದು ಸೂಕ್ಷ್ಮರೂಪದಲ್ಲಿ ಇತ್ತು. ಈ ಸಂಗತಿಯು ಅವರು ಬರೆದ ಪತ್ರಗಳಲ್ಲಿ ನಮಗೆ ತಿಳಿವಾಗಿ ತಿಳಿದು ಬರುತ್ತದೆ. ತಮ್ಮ ಅಮೆರಿಕಾ ಪ್ರವಾಸದ ಮೊದಲ ದಿನಗಳಲ್ಲಿ ಅವರಿಗಿದ್ದ ಗುರಿ, ಭಾರತದ ಭೌತಿಕ ಪ್ರಗತಿಗಾಗಿ ಅಮೆರಿಕದ ಜನರಿಂದ ಧನಸಹಾಯವನ್ನು ಪಡೆಯುವುದೇ ಆಗಿತ್ತು. ಅವರು ಆಗಸ್ಟ್ ೨೦, ೧೮೯೩ರಂದು ತಾವು ಬರೆದ ಒಂದು ಪತ್ರದಲ್ಲಿ ಹೀಗೆ ಹೇಳುತ್ತಾರೆ: ''ರಕ್ತ ಬಸಿಯುತ್ತಿರುವ ನನ್ನ ಹೃದಯದಿಂದ ನಾನು ಅರ್ಧ ಭೂಗೋಳವನ್ನು ದಾಟಿ, ಈ ಅಪರಿಚಿತ ದೇಶಕ್ಕೆ ಸಹಾಯವನ್ನು ಯಾಚಿಸಿ ಬಂದಿದ್ದೇನೆ.'' ಅವರು ಮತ್ತೆ ೧೮೯೪ರಲ್ಲಿ ಸ್ವಾಮಿ ರಾಮಕೃಷ್ಣಾನಂದಜಿ ಅವರಿಗೆ ಅಮೆರಿಕದಿಂದ ಬರೆದ ತಮ್ಮ ಮೊದಲ ಪತ್ರದಲ್ಲಿ ಹೀಗೆ ಬರೆಯುತ್ತಾರೆ: ''ನಾನು ಅಮೆರಿಕೆಗೆ ಬಂದದ್ದು (ನನ್ನ ಭಾರತದ ಕಾರ್ಯಕ್ಕಾಗಿ) ಹಣವನ್ನು ಸಂಪಾದಿಸಲು. ಈ ಕಾರ್ಯವು ಕೈಗೊಂಡ ಮೇಲೆ, ನಾನು ನನ್ನ ದೇಶಕ್ಕೆ ಹಿಂತಿರುಗಿ ಹೋಗುತ್ತೇನೆ ಮತ್ತು ನನ್ನ ಜೀವನದ


ಉಳಿದ ದಿನಗಳನ್ನು ನನ್ನ ಜೀವನ ಧ್ಯೇಯವನ್ನು ಸಾಕಾರಗೊಳಿಸಲು ಮುಡಿಪಾಗಿಡುತ್ತೇನೆ.'' ಆ ಜೀವನ ಧ್ಯೇಯವು ಭಾರತದ ಪುನರುತ್ಥಾನವೇ ಆಗಿತ್ತು ಎನ್ನುವುದು ನಿಸ್ಸಂದೇಹ.

ಸ್ವಾಮೀಜಿಯವರು ಆ ಸಮಯದಲ್ಲಿ ಇಟ್ಟುಕೊಂಡಿದ್ದ ತಮ್ಮ ಜೀವಿತ ಗುರಿಯ ಬಗೆಗಿನ ಪರಿಕಲ್ಪನೆಯನ್ನು ಇನ್ನೂ ಕೆಲವು ಪತ್ರಗಳಲ್ಲಿ ಕಾಣಬಹುದು. ೧೮೯೪ರ ಜೂನ್ ತಿಂಗಳಿನಲ್ಲಿ ತಾವು ಜುನಾಗಢದ ದಿವಾನರಿಗೆ ಬರೆದ ಪತ್ರದಲ್ಲಿ ಅವರು ಹೇಳಿಕೊಳ್ಳುತ್ತಾರೆ: ''ಪ್ರಾಥಮಿಕವಾಗಿ ನಾನು ಅಮೆರಿಕೆಗೆ ಬಂದ ಉದ್ದೇಶ ನನ್ನದೊಂದು ದೊಡ್ಡ ಯೋಜನೆಗೆ ಹಣವನ್ನು ಸಂಗ್ರಹಿಸಲು. ಭಾರತದ ಜನಸಾಮಾನ್ಯರಿಗೆ ನಾವು ಅವರು ಕಳೆದುಕೊಂಡಿರುವ ಅಸ್ಮಿತೆಯನ್ನು ಮರಳಿ ದೊರಕಿಸಿಕೊಡಬೇಕು. ಅದಕ್ಕಾಗಿ ಅವರನ್ನು ಸುಶಿಕ್ಷಿತರನ್ನಾಗಿ ಮಾಡಬೇಕು.'' ಸರಿಸುಮಾರು ಅದೇ ಸಮಯದಲ್ಲಿ ಸ್ವಾಮೀಜಿ ಮೈಸೂರಿನ ಮಹಾರಾಜರಿಗೆ ಹೀಗೆ ಬರೆಯುತ್ತಾರೆ: ''ಭಾರತದ ಜನಸಾಮಾನ್ಯರ ಮೆದುಳುಗಳಲ್ಲಿ ನಾವು ಉನ್ನತ ಭಾವನೆಗಳನ್ನು ತುಂಬಬೇಕು. ಮುಂದಿನದನ್ನು ಅವರೇ ನಿರ್ಧರಿಸಿಕೊಳ್ಳುತ್ತಾರೆ. ಭಾರತ ದೇಶದಲ್ಲಿ ನಾವು ಮಾಡಬೇಕಾಗಿರುವುದು ಇದನ್ನೇ. ಈ ಯೋಜನೆಯು ನನ್ನ ಮನಸ್ಸಿನಲ್ಲಿ ಬಹಳ ಕಾಲದಿಂದಲೂ ಇತ್ತು. ಅದನ್ನು ನಾನು ಭಾರತದಲ್ಲಿಯೇ ಇದ್ದುಕೊಂಡು ಸಾಧಿಸಲು ಸಾಧ್ಯವಾಗಲಿಲ್ಲ. ಹಾಗೆಂದೇ ನಾನು ಈ ದೇಶಕ್ಕೆ ಬಂದೆನು.''

ಸ್ವಾಮೀಜಿ ಮತ್ತೆ ಮತ್ತೆ ಈ ಬಗೆಯ ಹೇಳಿಕೆಗಳನ್ನು ನೀಡುವುದನ್ನು ನಾವು ನೋಡುತ್ತೇವೆ. ಅವುಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಪ್ರಸಾರಮಾಡುವ ಕಲ್ಪನೆಯನ್ನೇನೂ ನಾವು ಕಾಣುವುದಿಲ್ಲ. ಭಾರತದ ಜನಸಾಮಾನ್ಯರಿಗಾಗಿ ಅಮೆರಿಕದಿಂದ ಸಹಾಯಧನವನ್ನು ತರುವ ಅವರ ಬಯಕೆ ಅದೆಷ್ಟು ತೀವ್ರವಾಗಿತ್ತು ಎಂದರೆ, ತಾವು ಮಾಡುತ್ತಿದ್ದ ಪ್ರವಚನಗಳಿಂದ ಅವರಿಗೆ ಸಿಗುತ್ತಿದ್ದ ಹಣ ಅಲ್ಪವಾಗಿದ್ದರೂ, ಭವಿಷ್ಯದಲ್ಲಿ ಸಹಾಯ ದೊರಕುತ್ತದೆ ಎಂಬ ಅವರ ವಿಶ್ವಾಸ ಕಡಮೆಯಾಗಿರಲಿಲ್ಲ. ಇದಕ್ಕೆ ನಿದರ್ಶನವಾಗಿ ಅವರು ಏಪ್ರಿಲ್ ೧೮೯೭ರಂದು ರವೀಂದ್ರನಾಥ ಟಾಗೋರರ ಸಂಬಂಧಿಯಾದ ಶ್ರೀಮತಿ ಸರಳಾದೇವಿ ಅವರಿಗೆ ಬರೆದ ಪತ್ರದ ಈ ಸಾಲುಗಳನ್ನು ನೋಡಬಹುದು: ''ನಾನು ಇನ್ನೊಂದು ಸಲ ಪಾಶ್ಚಾತ್ಯ ದೇಶಗಳಿಗೆ ಹೋಗುವುದು ಇನ್ನೂ ಸಂದಿಗ್ಧವಾಗಿಯೇ ಇದೆ. ಈ ದೇಶದಲ್ಲಿ ಜನಗಳಿಗೆ ಶಕ್ತಿ ಎಲ್ಲಿ ತಾನೇ ಇದೆ?'' ಆಸಕ್ತಿಕರವಾದ ವಿಷಯವೆಂದರೆ, ಸ್ವಾಮೀಜಿಯವರು ದೇಹತ್ಯಾಗ ಮಾಡಿದ ಬಹುಕಾಲದ ನಂತರ, ೧೯೩೧ರ ಹೊತ್ತಿಗೆ, ಅಮೆರಿಕಾದಿಂದ ಭಾರತಕ್ಕೆ ಬಹಳಷ್ಟು ಧನಸಹಾಯ ಒದಗಿಬರುವುದನ್ನು ನಾವು ಕಾಣುತ್ತೇವೆ.

ಹಾಗೆಂದು, ಆ ಮೊದಲ ದಿನಗಳಲ್ಲಿ ಸ್ವಾಮೀಜಿಯವರ ಏಕಮಾತ್ರ ಉದ್ದೇಶ ತಮ್ಮ ತಾಯ್ನಾಡಿಗಾಗಿ ಸಹಾಯವನ್ನು ಪಡೆಯುವುದು ಮಾತ್ರವಾಗಿತ್ತು ಎಂದೇನೂ ನಾವು ಹೇಳುವ ಹಾಗೂ ಇಲ್ಲ. ಅವರು ಹೋದೆಡೆಯಲ್ಲೆಲ್ಲಾ , ಭಾರತೀಯ ಜನರ ಆಚಾರ ವ್ಯವಹಾರಗಳ ಬಗ್ಗೆ ಅಮೆರಿಕದ ಜನತೆಗೆ ನೈಜ ಬೆಳಕನ್ನು ಚೆಲ್ಲಿದರು. ಇದಲ್ಲದೆ, ಹಿಂದೂಧರ್ಮದ ಉದಾತ್ತ ಮತ್ತು ಉನ್ನತ ಆದರ್ಶಗಳ ಬಗ್ಗೆ ಅವರಿಗೆ ತಿಳಿಯಹೇಳಿದರು. ಭಾರತದ ಬಗ್ಗೆ ಅಮೆರಿಕದ ಜನತೆಗೆ ಇದ್ದ ತಪ್ಪು ಅಭಿಪ್ರಾಯಗಳನ್ನು ತೊಡೆದುಹಾಕುವುದಕ್ಕೆ  ನಿರಂತರವಾಗಿ ಪ್ರಯತ್ನಿಸಿದರು. ಈ ಉದ್ದೇಶ ಸಫಲವಾದರೆ, ತಾವು ಅಮೆರಿಕಾಗೆ ಬಂದದ್ದು ಸಾರ್ಥಕವಾಯಿತು ಎಂದು ಅವರು ಭಾವಿಸುತ್ತಿದ್ದರು. ಈ ಭಾವನೆಯಿಂದಲೇ ಅವರು ನವೆಂಬರ್, ೧೮೯೪ರಂದು ತಮ್ಮ ಮಿತ್ರರಾದ ಜುನಾಗಢ ರಾಜ್ಯದ ದಿವಾನ್ ಹರಿದಾಸ್ ವಿ. ದೇಸಾಯಿ ಅವರಿಗೆ ಹೀಗೆ ಬರೆಯುತ್ತಾರೆ: ''ನಾನು ಇಲ್ಲಿಗೆ ಬಂದು ಇನ್ನೇನನ್ನೂ ಮಾಡದಿದ್ದರೂ, ನನ್ನ ಆಗಮನವು ಅಮೆರಿಕದ ಜನರಿಗೆ ಭಾರತವು ಇನ್ನೂ ಕೂಡ, ಬಹುತೇಕ ನಾಗರಿಕ ದೇಶಗಳು ಕೂಡ ಹುಟ್ಟಿಸದಿರುವ ಮಹಾತ್ಮರನ್ನು ಸೃಷ್ಟಿಸುತ್ತಿದೆ ಎಂಬ ಅರಿವನ್ನು ಉಂಟುಮಾಡಿದೆ. ಅಂಥ ಮಹಾತ್ಮರ ಪಾದದಡಿಯಲ್ಲಿ ಕುಳಿತು, ಧರ್ಮ ಮತ್ತು ನೈತಿಕತೆಯ ಪಾಠಗಳನ್ನು ಅಮೆರಿಕಾದ ಜನತೆ ಕಲಿತುಕೊಳ್ಳಬಹುದು.''

ಇಷ್ಟು ಮಾತ್ರವಲ್ಲ, ಸ್ವಾಮೀಜಿ ಅಮೆರಿಕದ ಜನತೆಗೆ ಮಾನವನ ದಿವ್ಯತೆಯ ಬಗ್ಗೆ ಉಪದೇಶಿಸಿದರು; ಧರ್ಮದ ನೈಜ ಅರ್ಥವನ್ನು ಬೋಧಿಸಿದರು; ಭಕ್ತಿಯ ಪ್ರಮುಖ ಲಕ್ಷಣಗಳನ್ನು ಹೇಳಿಕೊಟ್ಟರು. ಇದಲ್ಲದೆ, ಸ್ವಾಮಿ ವಿವೇಕಾನಂದರು ಬುದ್ಧ ಮತ್ತು ಬೌದ್ಧಧರ್ಮದ ಬಗ್ಗೆ ಸರಿಯಾದ ಅರಿವನ್ನು ಮೂಡಿಸಿದರು. ಇದಲ್ಲಕ್ಕಿಂತ ಮಿಗಿಲಾಗಿ, ತಮ್ಮ ಗುರುದೇವರಾದ ಶ್ರೀರಾಮಕೃಷ್ಣರ ಪ್ರಮುಖ ಸಂದೇಶವಾದ ಎಲ್ಲ ಧಾರ್ಮಿಕ ಆಕಾಂಕ್ಷೆಗಳ ಮೂಲಭೂತ ಐಕ್ಯತೆಯನ್ನು ಸ್ವಾಮೀಜಿ ಪ್ರತಿಪಾದಿಸಿದರು. ತಮ್ಮ ಮೊದಲ ವರ್ಷದಲ್ಲಿ ಸ್ವಾಮೀಜಿ ಮಾಡಿದ ಈ ಎಲ್ಲ ಪ್ರವಚನಗಳು ಅಮೆರಿಕದ ಜನಮಾನಸದಲ್ಲಿ ಅಭೂತಪೂರ್ವ ಪರಿಣಾಮವನ್ನು ಬೀರಿತು. ಆದರೂ ಕೂಡ, ಪಾಶ್ಚಾತ್ಯ ದೇಶಗಳಲ್ಲಿ ತಾವು ಮಾಡಬೇಕಾದ ವಿಶೇಷವಾದ ಕಾರ್ಯವೊಂದಿದೆ ಎಂದಾಗಲೀ, ಅಮೆರಿಕದ ಜನಗಳು ಅನುಸರಿಸಬೇಕಾದ ಒಂದು ಆಧ್ಯಾತ್ಮಿಕ ತತ್ತ್ವವೊಂದನ್ನು ತಾವು ಬೋಧಿಸುತ್ತಿದ್ದೇವೆ ಎಂದಾಗಲೀ ಸ್ವಾಮೀಜಿಯವರು ಭಾವಿಸಿರಲಿಲ್ಲ. ಅದಕ್ಕೆ ಬದಲಾಗಿ, ಈ ಬಗೆಯ ಗಂಭೀರವಾದ ಮತ್ತು ಸರ್ವಾಂಗೀಣ ಪರಿವರ್ತನೆಯನ್ನು ಉಂಟುಮಾಡುವ ಆಧ್ಯಾತ್ಮಿಕ ಬೋಧನೆಗಳನ್ನು ಸಾರ್ವಜನಿಕ ಭಾಷಣಗಳ ಮೂಲಕ ನೀಡಲು ಸಾಧ್ಯವಿಲ್ಲವೆಂದೇ ಅವರು ಪರಿಗಣಿಸಿದ್ದರು. *(ಮುಂದುವರಿಯುವುದು)*


ಕಾಶ್ಮೀರದ ಶಾಲು
ಕಥೆ: ಪರಮಹಂಸದಾಸ
ಚಿತ್ರ: ಶಂಕರ್
1
ಒಮ್ಮೆ ವಿಜಯನಗರವನ್ನು ಚೊಕ್ಕಲಿಂಗಂ ಎಂಬ ದೊರೆ ಆಳುತ್ತಿದ್ದನು. ಆತನು ಒಂದು ದಿನ ತಿರುಚ್ಚಿಯ ಕೋಟೆಯಲ್ಲಿರುವ ಗಣಪತಿ ಹಾಗೂ ಜಗನ್ಮಾತೆಯನ್ನು ದರ್ಶಿಸಿ ಪೂಜಾದಿಗಳನ್ನು ಮುಗಿಸಿಕೊಂಡು ತನ್ನ ಪರಿವಾರದೊಂದಿಗೆ ಹಿಂದಿರುಗುತ್ತಿದ್ದನು.
2
ದಾರಿಯಲ್ಲಿ ಆತ ಒಂದು ಮರದ ಕೆಳಗೆ ಧ್ಯಾನ ಮಾಡುತ್ತಿದ್ದ ತಯುಮನವರ್ ಎಂಬ ಸಾಧುವನ್ನು ಕಂಡು, ತನ್ನ ಪಲ್ಲಕ್ಕಿಯಿಂದ ಇಳಿದನು.
ಹಾ! ನನಗಿಂದು ಸಾಧುಮಹಾತ್ಮರ ಆಶೀರ್ವಾದವನ್ನು ಪಡೆಯುವ ಸುಯೋಗ ಲಭಿಸಿದೆ. ಆತನ ಧ್ಯಾನ ಮುಗಿಯುವವರೆಗೂ ನಾನು ಕಾಯುತ್ತೇನೆ.
ತಮ್ಮಿಚ್ಛೆ!
3
ಕೆಲವು ಸಮಯದ ನಂತರ ಆ ಸಾಧು ತನ್ನ ಕಣ್ಣನ್ನು ತೆರೆದನು. ದೊರೆ ಸಾಧುವಿಗೆ ನಮಸ್ಕರಿಸಿದನು.
ದೀರ್ಘಾಯುವಾಗು! ನಿನಗೆ ಜಯವಾಗಲಿ!
4
ಚಳಿಗಾಲ, ಕೊರೆಯುತ್ತಿರುವ ಚಳಿ!
ಈ ಸಾಧು ಮಹಾತ್ಮ ಈ ಕೊರೆಯುವ ಚಳಿಯನ್ನು ಹೇಗೆ ಸಹಿಸುತ್ತಿದ್ದಾರೊ!
5
ಮಂತ್ರಿಗಳೇ, ಈಗಲೇ ಒಂದು ಒಳ್ಳೆಯ ಕಾಶ್ಮೀರದ ಶಾಲನ್ನು ತರಿಸುವ ವ್ಯವಸ್ಥೆ ಮಾಡಿರಿ. ನಾನು ಈ ಊರನ್ನು ಬಿಡುವ ಮುನ್ನ ಆ ಶಾಲನ್ನು ಈ ಸಾಧುಗಳಿಗೆ ಅರ್ಪಿಸಬೇಕು.
ಬೇಗ ತರಿಸುತ್ತೇನೆ.